EAT THE BEST
SHREEDEVI SR PLANTAIN LEAF
RESTAURANT
Veg & Non-Veg
Andhra Food
North Indian
Tandoor
1979, Rajkamal Talkies Road, Mysore-1
Tel: 2428034/2420420
We Undertake Outdoor Catering

ಆಂದೋಲನ
ದಿನಪತ್ರಿಕೆ
ಸಂಪಾದಕ : ರಾಜಶೇಖರ ಕೋಟಿ

ಮೈಸೂರು ನಂದಿನಿ ಫ್ಯಾಮಿಲಿ ರೆಸ್ಟೋರೆಂಟ್
mysore nandhini Heritage
Family Restaurant Veg & Non Veg
Andhra Style Irwin Road, Near KSRTC Bus Stand Mysuru - 01
Tandoori Chinese Sea Food
Ph: 0821 - 4191009, 2430241
90082 85555
FREE HOME DELIVERY
Parking Available

ಸಂಪುಟ: ೪೬ ಸಂಚಿಕೆ: ೨೩೯, ರಾಷ್ಟ್ರೀಯ ಶಕ ೧೯೩೯ ಶರತ್ –ಭಾದ್ರಪದ ೧೫ ○ ಹುಣ್ಣಿಮೆ– ಶತಭಿಷ, ಬುಧವಾರ, ಸೆ.೬, ೨೦೧೭, ದೂರವಾಣಿ: ೨೪೪೯೫೦೧, ೨೪೪೯೫೦೪, ೨೪೪೯೫೦೫, ಫ್ಯಾಕ್ಸ್: ೨೪೪೯೫೦೩, ಪುಟ: ೧೨, ರೂ. ೩

ಗೌರಿ ಲಂಕೇಶ್ ಹತ್ಯೆ

- ● ರಾಜರಾಜೇಶ್ವರಿ ನಗರದಲ್ಲಿನ ಮನೆ ಬಳಿ ಮಂಗಳವಾರ ರಾತ್ರಿ ೮ರಲ್ಲಿ ಘಟನೆ
- ● ಮೂವರು ಹಂತಕರಿಂದ ಕೃತ್ಯ; ೩ ಗುಂಡು ದೇಹಕ್ಕೆ, ೪ ಗುಂಡು ಗೋಡೆಗೆ
- ● ಘಟನೆ ಖಂಡಿಸಿ ಬೆಂಗಳೂರು, ಮಂಡ್ಯ, ಗುಲ್ಬರ್ಗ, ಗದಗ, ಧಾರವಾಡದಲ್ಲಿ ಪ್ರತಿಭಟನೆ

೧೯೬೨–೨೦೧೭

ಬೆಂಗಳೂರು,ಸೆ.೫– ಹಿರಿಯ ಪತ್ರಕರ್ತೆ, ಹೋರಾಟಗಾರ್ತಿ, ಚಿಂತಕಿ, ಸಾಹಿತಿ ಗೌರಿ ಲಂಕೇಶ್ (೫೫) ಅವರನ್ನು ಮೂವರು ದುಷ್ಕರ್ಮಿಗಳು ಮಂಗಳವಾರ ರಾತ್ರಿ ಗುಂಡು ಹಾರಿಸಿ ಹತ್ಯೆ ಮಾಡಿದ್ದು, ಇಡೀ ರಾಜ್ಯ ದಿಗ್ಭ್ರಮೆಗೊಳಗಾಗಿದೆ.

ರಾಜರಾಜೇಶ್ವರಿ ನಗರದ ಐಡಿಯಲ್ ಹೋಮ್ಸ್‌ನಲ್ಲಿರುವ ತಮ್ಮ ಮನೆಗೆ ಅದೇ ತಾನೆ ೮.೨೦ ಕಾರಿನಲ್ಲಿ ಬಂದಿಳಿದ ಗೌರಿ ಲಂಕೇಶ್ ಅವರು, ಗೇಟು ತೆಗೆದು ಒಳ ಪ್ರವೇಶಿಸುತ್ತಿದ್ದಾಗಲೇ ಮೂವರು ದುಷ್ಕರ್ಮಿಗಳ ತಂಡ ಏಳು ಸುತ್ತು ಗುಂಡು ಹಾರಿಸಿ ಹತ್ಯೆ ಮಾಡಿದೆ. ನಂತರ ದ್ವಿಚಕ್ರ ವಾಹನದಲ್ಲಿ ಪರಾರಿಯಾಗಿದೆ. ಗುಂಡಿನ ದಾಳಿಗೆ ಗೌರಿ ಲಂಕೇಶ್ ಸ್ಥಳದಲ್ಲೇ ಕುಸಿದುಬಿದ್ದು ಮೃತಪಟ್ಟಿದ್ದಾರೆ.

ಸ್ಥಳೀಯರ ಪ್ರಕಾರ, ರಾತ್ರಿ ೮ರ ಸಮಯದಲ್ಲಿ ಮನೆಗೆ ಬಂದ ಗೌರಿ ಅವರು, ಮನೆಯ ಬೀಗ ತೆಗೆಯಲು ಮುಂದಾಗುತ್ತಿದ್ದಂತೆ ದ್ವಿಚಕ್ರ ವಾಹನದಲ್ಲಿ ಬಂದ ಮೂವರು ದುಷ್ಕರ್ಮಿಗಳು ಅವರ ಕಡೆಗೆ ಗುಂಡು ಹಾರಿಸಿದ್ದಾರೆ.

ಅತಿ ಸಮೀಪದಿಂದ ಗುಂಡು: ಗೌರಿ ಲಂಕೇಶ್ ಅವರ ಕಾರನ್ನು ಬಹಳ ದೂರದಿಂದಲೇ ಇಬ್ಬರು ಹಂತಕರು ಬೈಕ್‌ನಲ್ಲಿ ಹಿಂಬಾಲಿಸಿಕೊಂಡು ಬಂದಿದ್ದರೆ, ಒಬ್ಬಾತ ಮನೆ ಸಮೀಪದಲ್ಲೇ ಇದ್ದ. ಹಂತಕರು ಅತಿಸಮೀಪದಿಂದ ೭ ಗುಂಡು ಹಾರಿಸಿದ್ದಾರೆ. ೩ ಗುಂಡುಗಳು ತಲೆ, ಕುತ್ತಿಗೆ ಹಾಗೂ ಎದೆಗೆ ಹೊಕ್ಕಿದ್ದರೆ, ೪ ಗುಂಡುಗಳು ಮನೆಯ ಗೋಡೆಗೆ ತಗುಲಿವೆ. ಗೌರಿ ಲಂಕೇಶ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ನೆರೆಹೊರೆಯವರ ಹೇಳಿಕೆ: ಗೌರಿ ಲಂಕೇಶ್ ಕಚೇರಿಯಿಂದ ಸಾಮಾನ್ಯವಾಗಿ ತಡರಾತ್ರಿ ಮನೆಗೆ ಬರುತ್ತಿದ್ದರು. ಸ್ವತಃ ಕಾರು ಡ್ರೈವ್ ಮಾಡುತ್ತಿದ್ದರು. ಆದರೆ, ಮಂಗಳವಾರ ರಾತ್ರಿ ೮ಕ್ಕೆ ಹಿಂತಿರುಗಿದ್ದಾರೆ. ಗುಂಡಿನ ಸದ್ದು ಕೇಳಿ ನಾವೆಲ್ಲಾ ಹೊರಬಂದೆವು. ಕೆಲ ಕ್ಷಣ ಏನಾಗಿದೆ ಎಂಬುದೇ ನಮಗೂ ಗೊತ್ತಾಗಲಿಲ್ಲ. ಕಡೆಗೆ ಗೌರಿ ಲಂಕೇಶ್ ಅವರಿಗೆ ಗುಂಡು ಹಾರಿಸಲಾಗಿದೆ ಎಂಬುದು ಗೊತ್ತಾಯಿತು. ಬಾಗಿಲ ಬಳಿ ರಕ್ತದ ಮಡುವಿನಲ್ಲಿ ಅವರು ಬಿದ್ದಿದ್ದರು ಎಂದು ನೆರೆಹೊರೆಯವರು ಹೇಳಿದ್ದಾರೆ.

ಹಂತಕರ ಪತ್ತೆಗೆ ನಗರದಾದ್ಯಂತ ನಾಕಾಬಂದಿ ಏರ್ಪಡಿಸಲಾಗಿದೆ. ಗೌರಿ ಲಂಕೇಶ್ ಅವರ ಮನೆಯ ಆಸುಪಾಸಿನಲ್ಲಿರುವ ಸಿಸಿ ಟಿವಿ ಕ್ಯಾಮರಾಗಳನ್ನು ಪೊಲೀಸರು ಪರಿಶೀಲಿಸುತ್ತಿದ್ದಾರೆ. ಸಮೀಪದ ಕೆಂಗೇರಿ, ರಾಜರಾಜೇಶ್ವರಿ ನಗರ, ಬ್ಯಾಟರಾಯನಪುರ, ಚಂದ್ರಲೇಔಟ್, ಕಾಮಾಕ್ಷಿ ಪಾಳ್ಯ ಠಾಣೆ ಪೊಲೀಸರು, ಬೆಂಗಳೂರು ಪೊಲೀಸ್ ಆಯುಕ್ತ ಟಿ.ಸುನೀಲ್ ಕುಮಾರ್ ಮತ್ತು ಹಿರಿಯ ಪೊಲೀಸ್ ಅಧಿಕಾರಿಗಳು ಸ್ಥಳಕ್ಕೆ ಆಗಮಿಸಿ ಪರಿಶೀಲಿಸಿದ್ದಾರೆ.

ಘಟನೆ ಸ್ಥಳದಲ್ಲಿ ಗುಂಡಿನ ೪ ಕಾಟ್ರಿಡ್ಜ್ ದೊರೆತಿವೆ. ದೇಹಕ್ಕೆ ಎಷ್ಟು ಗುಂಡು ಹೊಕ್ಕಿವೆ ಎಂಬುದು ಶವಪರೀಕ್ಷೆ ನಂತರ ತಿಳಿಯಲಿದೆ. ತನಿಖೆಗಾಗಿ ೩ ತಂಡ ರಚಿಸಲಾಗಿದೆ. ದ್ವಿಚಕ್ರವಾಹನದಲ್ಲಿ ದುಷ್ಕರ್ಮಿಗಳು ಬಂದಿದ್ದರು ಎಂದು ನೆರೆಹೊರೆಯವರು ತಿಳಿಸಿದ್ದಾಗಿ ಪೊಲೀಸ್ ಆಯುಕ್ತ ಟಿ.ಸುನೀಲ್ ಕುಮಾರ್ ತಿಳಿಸಿದ್ದಾರೆ.

ಮೋಡಸ್ ಅಪರೆಂಡಿ: ಗೌರಿ ಲಂಕೇಶ್ ಅವರ ಹತ್ಯೆಯೂ ಈ ಹಿಂದೆ ನಡೆದಿರುವ ವಿಚಾರವಾದಿಗಳ ಕೊಲೆಯಾದ ರೀತಿಯಲ್ಲೇ ನಡೆದಿದೆ. ಮಹಾರಾಷ್ಟ್ರದ ಗೋವಿಂದ್ ಪನ್ಸಾರೆ, ನರೇಂದ್ರ ದಾಬೋಲ್ಕರ್, ಎಂ.ಎಂ.ಕಲಬುರಗಿ ಹಾಗೂ ಗೌರಿ ಹತ್ಯೆ ಕೃತ್ಯದ ಮಾದರಿ ಒಂದೇ ಬಗೆಯಲ್ಲಿದೆ. ಎದೆ, ತಲೆಗೇ ಗುರಿಯಿಟ್ಟು ಗುಂಡಿಕ್ಕಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

೩ ತನಿಖಾ ತಂಡ ರಚನೆ: ಗೌರಿ ಲಂಕೇಶ್ ಅವರ ಹತ್ಯೆ ಪ್ರಕರಣದ ತನಿಖೆಗಾಗಿ ೩ ಪ್ರತ್ಯೇಕ ತಂಡ ರಚಿಸಲಾಗಿದೆ.

⏭ ೮

ಬೆಂಗಳೂರಿನ ರಾಜರಾಜೇಶ್ವರಿ ನಗರದಲ್ಲಿನ ಮನೆಯ ಆವರಣದಲ್ಲಿ ರಕ್ತದ ಮಡುವಿನಲ್ಲಿರುವ ಗೌರಿ ಲಂಕೇಶ್ ಮೃತದೇಹ

ತಂದೆ ಪಿ.ಲಂಕೇಶ್ ಅವರೇ ತಮಗೆ ಸ್ಫೂರ್ತಿ ಎನ್ನುತ್ತಿದ್ದ ಗೌರಿ, ಯಾವುದಕ್ಕೂ ಅಂಜುತ್ತಿರಲಿಲ್ಲ. ತಮಗೆ ಅನಿಸಿದ್ದನ್ನು ನೇರವಾಗಿ ಹೇಳುತ್ತಿದ್ದರು. ಪ್ರಗತಿಪರ ಚಿಂತನೆ ರೂಢಿಸಿಕೊಂಡಿದ್ದರು.

> ಸಮಾಜಮುಖಿ, ವೈಚಾರಿಕತೆಯುಳ್ಳ ಗೌರಿ ಲಂಕೇಶ್ ಅವರ ಹತ್ಯೆ ಬಹಳ ನೋವುಂಟು ಮಾಡಿದೆ. ಇದು ಹೇಯ ಕೃತ್ಯ. ಗೌರಿ ಲಂಕೇಶ್ ಸಾಮಾಜಿಕ ಚಳವಳಿಯಲ್ಲಿ ತೊಡಗಿಸಿಕೊಂಡಿದ್ದರು. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ ನಕ್ಸಲೀಯರನ್ನು ಮುಖ್ಯವಾಹಿನಿಗೆ ತರಲು ಪ್ರಯತ್ನ ನಡೆಸಿದ್ದರು. ಶೋಷಿತರ ಬಗ್ಗೆ ಕಾಳಜಿ ಹೊಂದಿದ್ದರು. ಹಂತಕರನ್ನು ಹಿಡಿಯಲು ಹಿರಿಯ ಅಧಿಕಾರಿಗಳ ನೇತೃತ್ವದಲ್ಲಿ ೩ ತಂಡಗಳನ್ನು ರಚಿಸಲಾಗಿದೆ. ಮಹಾರಾಷ್ಟ್ರದಲ್ಲಿ ಪನ್ಸಾರೆ, ದಭೋಲ್ಕರ್ ಹತ್ಯೆಗೆ ಸಂಬಂಧಿಸಿ ಸಿಬಿಐ ತನಿಖೆ ನಡೆಸುತ್ತಿದೆ. ನಮ್ಮಲ್ಲಿಯೂ ಸಿಐಡಿ ಅಧಿಕಾರಿಗಳು ಎಂ.ಎಂ.ಕಲಬುರ್ಗಿ ಹತ್ಯೆ ಪ್ರಕರಣದ ತನಿಖೆ ನಡೆಸುತ್ತಿದ್ದಾರೆ. ಮಹಾರಾಷ್ಟ್ರದಲ್ಲಿ ತನಿಖೆ ನಡೆಸುತ್ತಿರುವ ಸಿಬಿಐ ಅಧಿಕಾರಿಗಳೊಂದಿಗೆ ಸಂವಹನ ನಡೆಸಿ ಆರೋಪಿಗಳ ಪತ್ತೆಗೆ ಸಹಕಾರ ಕೋರುವಂತೆ ನಮ್ಮ ಅಧಿಕಾರಿಗಳಿಗೆ ಸಲಹೆ ನೀಡಲಾಗಿದೆ. ಕಲಬುರ್ಗಿ ಮತ್ತು ಗೌರಿ ಲಂಕೇಶ್ ಹತ್ಯೆಯಲ್ಲಿ ಸಾಮ್ಯತೆ ಇದೆಯೇ ಎಂಬ ಬಗ್ಗೆ ಪೊಲೀಸರು ತನಿಖೆ ನಡೆಸಿ ಸೂಕ್ತ ಮಾಹಿತಿ ನೀಡಲಿದ್ದಾರೆ.
>
> –ಸಿದ್ದರಾಮಯ್ಯ, ಮುಖ್ಯಮಂತ್ರಿ

ಸಂಪಾದಕೀಯ

ಗೌರಿಯನ್ನು ಕೊಂದಿರಬಹುದು, ಆದರೆ ಅವರು ಹಚ್ಚಿದ ದೊಂದಿ ಉರಿಯುತ್ತಿದೆ...

ಅಪರೂಪದ ದಿಟ್ಟ ಪತ್ರಕರ್ತೆ, ಸಮಾನತೆ, ಕೋಮು ಸೌಹಾರ್ದತೆ ಹಾಗೂ ಮಾನವೀಯ ಮೌಲ್ಯಗಳ ಪ್ರತಿಪಾದಕಿಯಾಗಿದ್ದ ಗೌರಿ ಲಂಕೇಶ್ ಅವರನ್ನು ಬೆಂಗಳೂರಿನ ಅವರ ಮನೆಯ ಆವರಣದಲ್ಲಿ ಮಂಗಳವಾರ ಸಂಜೆ ಗುಂಡಿಕ್ಕಿ ಬರ್ಬರವಾಗಿ ಹತ್ಯೆ ಮಾಡಲಾಗಿದೆ. ಇದು ಅತ್ಯಂತ ಹೇಯವಾದ ಖಂಡನೀಯ ಕೃತ್ಯವಾಗಿದೆ. ಕೊಲೆಯ ಹಿಂದಿನ ನಿರ್ದಿಷ್ಟ ಕಾರಣ ಇನ್ನೂ ಗೊತ್ತಾಗಿಲ್ಲವಾದರೂ ತಮ್ಮ 'ಗೌರಿ ಲಂಕೇಶ್' ಪತ್ರಿಕೆಯ ಮೂಲಕ ಹಾಗೂ ಸ್ವತಃ ಹೋರಾಟಗಾರ್ತಿಯಾಗಿ, ವಿಚಾರವಾದಿಯಾಗಿ ಬಲಪಂಥೀಯ ವಿಚಾರಧಾರೆಗಳನ್ನು ಹಾಗೂ ಕೋಮು ವಿದ್ವೇಷ ಬಿತ್ತುವವರನ್ನು ನಖಶಿಖಾಂತ ವಿರೋಧಿಸುತ್ತಿದ್ದ ಹಿನ್ನೆಲೆಯಲ್ಲಿ ಅವರ ಕೊಲೆ ನಡೆದಿರುವ ಸಾಧ್ಯತೆಯೇ ಹೆಚ್ಚು. ಈ ಹಿಂದೆ ಮಹಾರಾಷ್ಟ್ರದಲ್ಲಿ ವಿಚಾರವಾದಿಗಳಾದ ನರೇಂದ್ರ ದಾಬೋಲ್ಕರ್ ಹಾಗೂ ಗೋವಿಂದ ಪನ್ಸಾರೆ ಹಾಗೂ ನಮ್ಮ ಕರ್ನಾಟಕದಲ್ಲೇ ಡಾ.ಎಂ.ಎಂ. ಕಲಬುರ್ಗಿ ಅವರುಗಳ ಹತ್ಯೆ ನಡೆದ ರೀತಿಯಲ್ಲೇ ಈ ಕೊಲೆಯೂ ನಡೆದಿರುವುದನ್ನು ನೋಡಿದರೆ ಈ ಸಾಧ್ಯತೆಗೆ ಪುಷ್ಟಿ ದೊರೆಯುತ್ತದೆ. ಆ ಕೊಲೆಗಳ ಹಾಗೆಯೇ ಇದು ಕೂಡ ವಿಚಾರವಾದಿಗಳ ಧ್ವನಿ ಹತ್ತಿಕ್ಕಲೆಂದೇ ಬಹು ವ್ಯವಸ್ಥಿತವಾಗಿ ನಡೆದಿರುವ ಪೂರ್ವ ಯೋಜಿತವಾದ ಕೊಲೆ ಎಂದೇ ಹೇಳಬೇಕಾಗಿದೆ. ಈ ಬೆಳವಣಿಗೆ ಅತ್ಯಂತ ಆತಂಕ ಉಂಟು ಮಾಡುವಂತಹದ್ದಾಗಿದೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಭಿನ್ನ ವಿಚಾರಧಾರೆಗಳಿರುವುದು ಸಹಜ. ಒಬ್ಬರ ವಿಚಾರವನ್ನು ಮತ್ತೊಬ್ಬರು ಒಪ್ಪದೇ ಇರಬಹುದು.

⏭ ೮

ಬಿಜೆಪಿ ಬೈಕ್ ರ್‍ಯಾಲಿಗೆ ತಡೆ

ನಿಷೇಧಾಜ್ಞೆ: ಅಶೋಕ್, ಶೋಭಾ, ಪ್ರತಾಪ್ ಸಿಂಹ ಬಂಧನ

ಬೆಂಗಳೂರು,ಸೆ.೫– ಪೊಲೀಸರ ಅನುಮತಿ ಪಡೆಯದೆ 'ಮಂಗಳೂರು ಚಲೋ' ಬೈಕ್ ರ್‍ಯಾಲಿಗೆ ಮುಂದಾದ ಬಿಜೆಪಿ ಮುಖಂಡರನ್ನು ಪೊಲೀಸರು ಕಾನೂನು ಮತ್ತು ಶಾಂತಿ ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಹಾಗೂ ಮುನ್ನೆಚ್ಚರಿಕೆ ಕ್ರಮವಾಗಿ ನಗರದಲ್ಲಿ ಬಂಧಿಸಿ 'ಮಂಗಳೂರು ಚಲೋ' ಬೈಕ್ ರ್‍ಯಾಲಿಯನ್ನು ತಡೆದಿದ್ದಾರೆ.

ಬಿಜೆಪಿ ಯುವ ಮೋರ್ಚಾ ಆಯೋಜಿಸಿರುವ ಮಂಗಳೂರು ಚಲೋ ಬೈಕ್ ರ್‍ಯಾಲಿಗೆ ರಾಜ್ಯದ ವಿವಿಧ ಜಿಲ್ಲಾಡಳಿತಗಳು ಅನುಮತಿ ನೀಡಿಲ್ಲ. ಜಿಲ್ಲೆಗಳಲ್ಲಿ ಮುಂಜಾಗ್ರತೆ ಕ್ರಮವಾಗಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ಕಾನೂನು ಉಲ್ಲಂಘಿಸಿ ರ್‍ಯಾಲಿಗೆ ಮುಂದಾದ ಮುಖಂಡರನ್ನು ಅಲ್ಲಲ್ಲೇ ಪೊಲೀಸರು ಬಂಧಿಸಿದ್ದಾರೆ.

ಬೆಂಗಳೂರು, ಮೈಸೂರು, ಮಂಡ್ಯ, ಚಾಮರಾಜನಗರ, ಹಾಸನ, ತುಮಕೂರು, ಕೋಲಾರ, ರಾಮನಗರ, ದಾವಣಗೆರೆ, ಹುಬ್ಬಳ್ಳಿ, ಮಂಗಳೂರು, ಶಿವಮೊಗ್ಗ, ಚಿಕ್ಕಮಗಳೂರು, ಬೆಳಗಾವಿ ಮತ್ತಿತರ ಜಿಲ್ಲೆಗಳಲ್ಲಿ ರ್‍ಯಾಲಿಗೆ ಅವಕಾಶ ನಿರಾಕರಿಸಲಾಗಿದೆ.

ಹಿಂದೂ ಸಂಘಟನೆ ಕಾರ್ಯಕರ್ತರ ಕೊಲೆಗಳನ್ನು ಖಂಡಿಸಿ, ಪಿಎಫ್ಐ, ಎಸ್‌ಡಿಪಿಐ ಸಂಘಟನೆಗಳನ್ನು ನಿಷೇಧಿಸುವಂತೆ ಆಗ್ರಹಿಸಿ ಬಿಜೆಪಿ ಯುವ ಮೋರ್ಚಾ ನಗರದ ಸ್ವಾತಂತ್ರ್ಯ ಉದ್ಯಾನವನದ ಬಳಿಯಿಂದ ಬೈಕ್ ರ್‍ಯಾಲಿ ಆರಂಭಿಸಲು ಮುಂದಾದಾಗ ಬಿಜೆಪಿ ಮುಖಂಡರನ್ನು ಪೊಲೀಸರು ವಶಕ್ಕೆ ತೆಗೆದುಕೊಂಡರು.

ಬಸ್‌ಗೆ ಬೆಂಕಿ ಹಚ್ಚಲು ಯತ್ನ: ಪಕ್ಷದ ನಾಯಕರು, ಕಾರ್ಯಕರ್ತರನ್ನು ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧ ಭಾಗಗಳಲ್ಲಿ ಪೊಲೀಸರು ಬಂಧಿಸಿದ್ದರಿಂದ ಮಾತಿನ ಚಕಮಕಿ, ತಳ್ಳಾಟಕ್ಕೆ ಎಡೆ ಮಾಡಿದ ಘಟನೆ ನಡೆದಿದೆ. ಹುಬ್ಬಳ್ಳಿಯಲ್ಲಿ ಸರ್ಕಾರಿ ಬಸ್‌ಗೆ ಬೆಂಕಿ ಹಚ್ಚುವ ಯತ್ನವೂ ನಡೆದಿದೆ. ಸಂಸದರಾದ ಶೋಭಾ ಕರಂದ್ಲಾಜೆ, ಪ್ರತಾಪ ಸಿಂಹ, ವಿಧಾನಸಭೆ ವಿರೋಧ ಪಕ್ಷದ ಉಪ ನಾಯಕ ಅಶೋಕ್, ಶಾಸಕ ಅರವಿಂದ ಲಿಂಬಾವಳಿ ಮತ್ತಿತರನ್ನು ಬಂಧಿಸಿದರು.

⏭ ೮

- ■ ಪೊಲೀಸರು, ಕಾರ್ಯಕರ್ತರ ಮಾತಿನ ಚಕಮಕಿ, ತಳ್ಳಾಟ– ಪೊಲೀಸರಿಗೆ ಧಮ್ಕಿ
- ■ ಆರ್.ಅಶೋಕ್ ನೇತೃತ್ವದಲ್ಲಿ ರಸ್ತೆ ತಡೆ, ಆಂಬ್ಯುಲೆನ್ಸ್ ಸಂಚಾರಕ್ಕೆ ಅಡಚಣೆ

ಸಾಲ ಮನ್ನಾಗೆ ದಿಲ್ಲಿ ಚಲೋ ಮಾಡಲಿ: ಸಿಎಂ

ಬೆಂಗಳೂರು,ಸೆ.೫– ಸಮಾಜದ ಸಾಮರಸ್ಯ ಕೆಡಿಸುವ 'ಮಂಗಳೂರು ಚಲೋ' ಬದಲಿಗೆ ರೈತರ ಸಾಲ ಮನ್ನಾ ಮಾಡುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಲು 'ದಿಲ್ಲಿ ಚಲೋ' ಮಾಡಿ. ನಾವೂ ಬರುತ್ತೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬಿಜೆಪಿ ಮುಖಂಡರಿಗೆ ಸವಾಲೆಸಿದಿದ್ದಾರೆ.

ಬಿಜೆಪಿಯ ಮಂಗಳೂರು ಚಲೋ ಬೈಕ್ ರ್‍ಯಾಲಿ ಕುರಿತು ಅಂಬೇಡ್ಕರ್ ಭವನದಲ್ಲಿ ಮಂಗಳವಾರ ಮಾಧ್ಯಮ ಪ್ರತಿನಿಧಿಗಳು ಕೇಳಿದ ಪ್ರಶ್ನೆಗೆ ಮುಖ್ಯಮಂತ್ರಿಗಳು ಈ ರೀತಿ ಪ್ರತಿಕ್ರಿಯಿಸಿದರು.

ರಾಷ್ಟ್ರೀಕೃತ ಮತ್ತು ಗ್ರಾಮೀಣ ಬ್ಯಾಂಕ್‌ಗಳಲ್ಲಿ ರೈತರು ಮಾಡಿರುವ ಸಾಲ ೪೨ ಸಾವಿರ ಕೋಟಿ ರೂ. ಗಳಷ್ಟಿದೆ. ಅದನ್ನು ಮನ್ನಾ ಮಾಡುವಂತೆ ಪ್ರಧಾನಿಯವರ ಮೇಲೆ ಒತ್ತಡ ಹೇರಲಿ. ಎಂದು ಮುಖ್ಯಮಂತ್ರಿ ಹೇಳಿದರು.

ಬಿಜೆಪಿಯವರು ಪಾದಯಾತ್ರೆ ಅಥವಾ ಬಹಿರಂಗ ಸಭೆ ಮಾಡಿದರೆ ಅದಕ್ಕೆ ನಮ್ಮ ವಿರೋಧ ಇಲ್ಲ. ಆದರೆ, ಬೈಕ್ ರ್‍ಯಾಲಿ ಒಪ್ಪುವುದಿಲ್ಲ. ಸಾವಿರಾರು ಬೈಕ್‌ಗಳು ೪–೫ ಕಡೆಗಳಿಂದ ರಸ್ತೆಗೆ ಇಳಿದರೆ ಸಾರ್ವಜನಿಕರಿಗೆ ಮತ್ತು ವಾಹನಗಳ ಸಂಚಾರಕ್ಕೆ ತೊಂದರೆಯಾಗುತ್ತದೆ ಎಂದರು.

ಸಾಮರಸ್ಯ ಹಾಳು ಮಾಡುವಂಥ ಕಾರ್ಯಕ್ರಮ ಏಕೆ ಬೇಕು? ಬಿಜೆಪಿಯವರು ಮುದ್ರಿಸಿದ ಪುಸ್ತಕದಲ್ಲಿ ಪ್ರಚೋದನಕಾರಿ ಬರಹಗಳೇ ಇವೆ. ಸಮಾಜದ ಶಾಂತಿ ಮತ್ತು ಸಾಮರಸ್ಯ ಹಾಳು ಮಾಡುವ ಭಾಷಣಗಳಿವೆ.

⏭ ೮

ಸಮಾಜದ ಶಾಂತಿ ಮತ್ತು ಸಾಮರಸ್ಯ ಹಾಳು ಮಾಡುವ, ಸಾರ್ವಜನಿಕರಿಗೆ ತೊಂದರೆ ನೀಡುವ ರ್‍ಯಾಲಿ ಗಳೇಕೆ ಬೇಕು?

ಮೈಸೂರು ಜಿಲ್ಲೆ ೩ ದಿನ ನಿಷೇಧಾಜ್ಞೆ

ಮೈಸೂರು: ಬಿಜೆಪಿ ಯುವ ಮೋರ್ಚಾ ಹಮ್ಮಿಕೊಂಡಿರುವ ಮಂಗಳೂರು ಚಲೋ ಹಿನ್ನೆಲೆಯಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಮಂಗಳವಾರ ಸಂಜೆಯಿಂದ ಸೆ.೮ ರವರೆಗೆ ಜಿಲ್ಲೆಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾಧಿಕಾರಿ ಡಿ.ರಂದೀಪ್ ಆದೇಶಿಸಿದ್ದಾರೆ.

ಮೈಸೂರು ಜಿಲ್ಲೆಯಾದ್ಯಂತ ಬೈಕ್ ರ್‍ಯಾಲಿ, ಪಾದಯಾತ್ರೆ ಮೆರವಣಿಗೆ, ಪ್ರತಿಭಟನೆ ಮತ್ತು ಸಾರ್ವಜನಿಕ ಸಭೆ ಸಮಾರಂಭಗಳನ್ನು ನಡೆಸದಂತೆ ನಿಷೇಧ ಹೇರಲಾಗಿದೆ.

22 ಕ್ಯಾರೆಟ್ ಚಿನ್ನದ ದರ
ತೊಳಸಿ THOLASI JEWELS
₹2813 1 ಗ್ರಾಂಗೆ
ಹಿಂದಿನ ದಿನದ ದರ
ಅಶೋಕ ರೋಡ್, ಮೈಸೂರು
Ph: 2521926, 2441926

NH Avati L Ramaseshaiah and Lakshmi Devamma Multispeciality Clinic | Shivarampet Mysore
ಉಚಿತ ಸ್ತ್ರೀರೋಗ ತಪಾಸಣೆ ಶಿಬಿರ
ದಿನಾಂಕ: 7 ಮತ್ತು 8 ಸೆಪ್ಟೆಂಬರ್ 2017, ಬೆಳಗ್ಗೆ 9.00 ರಿಂದ 3.00
ಲಕ್ಷಣಗಳು:
• ಹೊಟ್ಟೆನೋವು • ವಾಂತಿ ಸಂವೇದನೆ • ದೌರ್ಬಲ್ಯ • ಮೂತ್ರದ ಸೋಂಕು • ತಲೆನೋವು • ಬಿಳಿ ಮುಟ್ಟು • ಅಧಿಕ ರಕ್ತಸ್ರಾವ • ಮುಟ್ಟಿನ ತೊಂದರೆಗಳು • ಮುಟ್ಟಿನ ನೋವು • ಬಂಜೆತನ
ಉಚಿತ ತಪಾಸಣೆಗಳು:
• ನೋಂದಣಿ • ರಕ್ತದೊತ್ತಡ • ಸಂಪೂರ್ಣ ರಕ್ತ ಪರೀಕ್ಷೆ (ಸಿಬಿಸಿ) • ಪ್ಯಾಪ್ ಸ್ಮಿಯರ್ • ಸ್ತ್ರೀರೋಗ ತಜ್ಞರೊಂದಿಗೆ ಸಮಾಲೋಚನೆ
ಸ್ಥಳ: ಆವತಿ ಎಲ್ ರಾಮಶೇಷಯ್ಯ ಮತ್ತು ಲಕ್ಷ್ಮೀ ದೇವಮ್ಮ ಮಲ್ಟಿಸ್ಪೆಷಾಲಿಟಿ ಕ್ಲಿನಿಕ್
ನೋಂದಣಿಗಾಗಿ: 88847 44144
ಮೈಸೂರಿನ ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ಒಂದು ಘಟಕ